# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ
# ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 47 ಫ್ರಾ.ಸಾ. : 25**

| | | |
|---|---|---|
| ಸಾಕ್ಷಿಯ ಹೆಸರು | : | ದಿನೇಶ್ ನಾಯ್ಕ |
| ತಂದೆಯ ಹೆಸರು | : | ಈಶ್ವರ ನಾಯ್ಕ |
| ವಯಸ್ಸು | : | 42 ವರ್ಷ |
| ಕೆಲಸ | : | ಪಂಚಾಯತ್ ಅಭಿವೃದ್ಧಿ ಅಧಿಕಾರಿ,<br>ಚಂದಾವರ ಗ್ರಾಮ ಪಂಚಾಯತ್, ಹೊನ್ನಾವರ ತಾಲೂಕ್ |
| ವಾಸ | : | ತದಡಿ, ಗೋಕರ್ಣ |

**ದಿನಾಂಕಃ 09.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ–**

1. ದಿನಾಂಕ 06.11.2023 ರಿಂದ ಇಲ್ಲಿಯವರೆಗೆ ನಾನು ಚಂದಾವರ ಗ್ರಾಮ ಪಂಚಾಯತ್, ನಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 20.01.2026 ರಂದು ಹೊನ್ನಾವರ ಪೊಲೀಸ್ ನಿರೀಕ್ಷಕರು ಚಾ.ಸಾ.–14 ಹೀನಾ ಕೌಸರ್ ರವರು ವಾಸವಾಗಿರುವ ಮನೆಯು ಯಾರ ಹೆಸರಿನಲ್ಲಿ ಇರುತ್ತದೆ ಎಂಬ ಬಗ್ಗೆ ಪರಿಶೀಲಿಸಿ, ಸದರಿ ಮನೆಯ ಉತ್ತಾರ ಪೂರೈಸುವಂತೆ ಕೋರಿಕೊಂಡಿರುತ್ತಾರೆ. ಆನಂತರ ನಾನು ದಿನಾಂಕ 21.01.2026 ರಂದು ಚಾ.ಸಾ.–14 ರವರು ವಾಸವಾಗಿರುವ ಮನೆಗೆ ಬೇಟಿ ನೀಡಿ ಪರಿಶೀಲನೆ ನಡೆಸಿದಾಗ ಸದರಿ ಮನೆಯಲ್ಲಿ ಚಾ.ಸಾ–14 ಹಾಗೂ ಅವರ ಗಂಡ ಇಬ್ಬರೂ ಮನೆಯಲ್ಲಿ ವಾಸವಾಗಿರುವುದು ಕಂಡುಬಂದಿದೆ. ಆನಂತರ ನಾನು ನಮ್ಮ ಪಂಚಾಯತ್ ಕಾರ್ಯಾಲಯಕ್ಕೆ ವಾಪಾಸ್ಸು ಬಂದು ಸದರಿ ಮನೆಯ ದಾಖಲೆಗಳನ್ನು ಪರಿಶೀಲಿಸಲಾಗಿ, ಆ ಮನೆಯು ಚಾ.ಸಾ.–14 ರವರ ಗಂಡನಾದ ಮಹಮ್ಮದ್ ಮೀರಾ ಸಿಕಂದರ್ ರವರ ಹೆಸರಿನಲ್ಲಿ ಇರುವುದು ಕಂಡಬುಂದಿರುತ್ತದೆ, ಹಾಗೂ ಸದರಿ ಮನೆಯ ಸಂಖ್ಯೆ 471B ಆಗಿರುವುದು ಕಂಡುಬಂದಿರುತ್ತದೆ. ಆನಂತರ ನಾನು ಅದೇ ದಿನ ಸದರಿ ಮನೆಗೆ

ಸಂಬಂಧಿಸಿದ ಉತ್ತಾರನ್ನು (ರಶೀದಿ ನಮೂನೆ-3) ಕವಚ ಪತ್ರದೊಂದಿಗೆ ಪೊಲೀಸ್ ನಿರೀಕ್ಷಕರು ಹೊನ್ನಾವರ ಇವರಿಗೆ ಕಳುಹಿಸಿರುತ್ತೇನೆ. ಪೊಲೀಸರು ನೀಡಿದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-100 ಎಂದು, ಉತ್ತಾರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 101 ಎಂದು, ಕವಚ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.-102 ಎಂದು, ಅದರಲ್ಲಿರುವ ಸಹಿಯನ್ನು ನಿ.ಪಿ.-102(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ .ಸಿ.ಎಲ್.ಎ. ಡಿ.ಸಿ ರವರಿಂದಃ**

2. ಸರ್ವೆ ನಂಬರ ಹಾಗೂ ಮನೆ ನಂಬರಗಳು ಬೇರೆ-ಬೇರೆ ಎಂದರೆ ಸರಿ. ಸರ್ವೆ ನಂಬರ ಎಂದರೆ ಕೇವಲ ಜಾಗಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ. ನಿ.ಪಿ.-102 ರಲ್ಲಿ ಸರ್ವೆ ನಂಬರ ಎಂದು ಬರೆಯಲಾಗಿರುತ್ತದೆ ಎಂದು ಸಾಕ್ಷಿಯು ಸ.ನಂ 471/ಬಿ ಎಂದು ನಮೂದಿಸಿದ್ದು ಅದು ಮನೆ ನಂಬರ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದು ಸರ್ವೆನಂಬರ ಆಗಿದ್ದುರೂ ಸಹ ಮನೆ ನಂಬರ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಸಾಕ್ಷಿ ನೀಡುವ ಮೊದಲು ಸದರಿ ಕವಚ ಪತ್ರವನ್ನು ಓದಿರುತ್ತೇನೆ ಎಂದರೆ ಸರಿ. ನಿ.ಪಿ.-101 ಉತ್ತಾರ ಚಾ.ಸಾ.-14 ರವರು ವಾಸವಿದ್ದ ಮನೆಗೆ ಸಂಬಂಧಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಾನು ಎಂದಿಗೂ ಚಾ.ಸಾ.-14 ರವರ ಮನೆಗೆ ಬೇಟಿ ನೀಡಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತನ್ನು ಕೇಳಿ ನಿ.ಪಿ.-101 ದಾಖಲೆಯನ್ನು ಸ್ರಷ್ಟಿಸಿ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.